**ಸಿ.ಸಿ.ನಂ.331/2025**

**ಪಿ.ಡಬ್ಲ್ಯು-1**

ಫಿರ್ಯಾದಿದಾರನನ್ನು ದಿನಾಂಕ 07-11-2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ. ಎ.ಎಸ್.ಎಸ್ ವಕೀಲರಿಂದ ಃ**

1. ನಾನು ಫೋಟೊಗ್ರಾಫಿ, ವಾಲಪೆಂಟಿಂಗ, ಧ್ವನಿವರ್ಧಕದಿಂದ ಅಟೋ ಮೂಲಕ ಪ್ರಚಾರ ಕೆಲಸ ಮಾಡುತ್ತೇನೆ. ಈ ಎಲ್ಲ ಕೆಲಸಗಳಿಂದ ನಾನು ತಿಂಗಳಿಗೆ 50-60 ಸಾವಿರ ರೂಪಾಯಿ ಸಂಪಾದಿಸುತ್ತೇನೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಪಾದನೆ ತೋರಿಸುವ ದಾಖಲೆಗಳು ಇಲ್ಲಾ. ಅಟೋದಿಂದ ತಿಂಗಳಿಗೆ 15-20 ಸಾವಿರ ರೂಪಾಯಿ ಮಾತ್ರ ಸಂಪಾದಿಸುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಪಿ 15 ವರ್ಷಗಳಿಂದ ಪರಿಚಯ. ಆರೋಪಿ ಹೆಸರು ರಾಜೇಶ್ವರಿ ರಾಹುಲ ಅಲಗೂರ ಉರ್ಫ ಬಿಜ್ಜರಗಿ.

2. ಆರೋಪಿಯ ಮಗನ ವಿರುದ್ದ ನಾನು ಹಣ ಮರುಪಾವತಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಆರೋಪಿಯವರ ಮಗನಿಗೆ ಶಿಕ್ಷಣ ಮತ್ತು ನೌಕರಿಗಾಗಿ 2 ಲಕ್ಷ ಹಣ ನೀಡಿದ್ದೇನು. ಸದರಿ ಹಣ ನೀಡಿದ ಕಾರಣ ಆರೋಪಿ ಮಗನ ಜೊತೆ ನಾನು ಬಾಂಡಕರಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಕೇಸಿನ ಬಗ್ಗೆ ಆರೋಪಿ ಬಾಂಡ ಮಾಡಿಕೊಡುವಾಗ ಅವರ ಮಗನ ಕಡೆ ಎರಡು ಚೆಕ್ ಪಡೆದಿದ್ದೇನೆ ಎಂದರೆ ಸರಿ. ಆದರೆ ಆ ವೇಳೆಯಲ್ಲಿ ಆರೋಪಿ ಕಡೆಯಿಂದ ಮೂರು ಚೆಕ್ ಪಡೆದಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಾಂಡ ಆರೋಪಿ ಮಗನ ಕಡೆಯಿಂದ ಪಡೆದುಕೊಳ್ಳುವಾಗ ಆರೋಪಿಕಡೆಯಿಂದ ಪಡೆದಿರುವ ಮೂರು ಚೆಕ್‌ಗಳಲ್ಲಿ ಒಂದು ಚೆಕ್‌ನ್ನು ದುರುಪಯೋಗ ಪಡೆಸಿಕೊಂಡು ಸುಳ್ಳು ಫಿರ್ಯಾದಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿಃ 01-04-2020 ರಿಂದ 01-02-2022 ರ ವರೆಗೆ ನಾನು ಆರೋಪಿಗೆ ಎಷ್ಟು ಕಂತುಗಳಾಗಿ ಹಾಗೂ ಎಷ್ಟು ಮೊತ್ತವನ್ನು ನಿಖರವಾಗಿ ನೀಡಿದ್ದೇನೆ ಹೇಳಲಾಗುವದಿಲ್ಲ ಆದರೆ ಎರಡು ವರ್ಷಗಳ ವರೆಗೆ ಹಣ ಕೊಟ್ಟಿದ್ದೇನೆ ಎನ್ನುತ್ತಾರೆ. ನಾನು ಹಾಜರಪಡಿಸಿರುವ ನನ್ನ ಸ್ಟೆಟಮೆಂಟ ಆಫ್ ಅಕೌಂಟನಲ್ಲಿ ಆರೋಪಿ ಜೊತೆಗೆ ಮಾಡಿರುವ ವ್ಯವಹಾರದ ಬಗ್ಗೆ ನಮೂದುಗಳು ಇವೆ. ದಿಃ 01-04-2020 ರಿಂದ 01-02-

2022 ರ ವರೆಗೆ ನಾನು ಆರೋಪಿಗೆ ನೀಡಿರುವ ಬಗ್ಗೆ ಪ್ರತ್ಯೇಕ ದಾಖಲೆಗಳು ಇಲ್ಲಾ ಆದರೆ ಬಾಂಡ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಸದರಿ ಬಾಂಡನ್ನು ಈ ಚೆಕ್‌ಗೆ ಸಂಬಂಧಪಟ್ಟ ಹಾಗೆ ಲೋಕ ಅದಾಲತ್ತ ನಲ್ಲಿ ರಾಜಿ ಮಾಡಿಕೊಳ್ಳುವ ಸಲುವಾಗಿ ಬರೆಯಲಾಗಿತ್ತು. ಸದರಿ ಬಾಂಡನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ನಿಪಿ-1 ಚೆಕ್ಕಿಗೆ ಮಾಡಿರುವ ಸಹಿ ಆರೋಪಿ ಸಹಿ ಅಲ್ಲಾ ಎಂದರೆ ಸರಿಯಲ್ಲ. ನಿಪಿ-1 ಚೆಕ್‌ನಲ್ಲಿ ಆರೋಪಿಯೇ ತುಂಬಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ 15 ಲಕ್ಷ ಹಣ ಆರೋಪಿಗೆ ಕೊಡಲು ಇರಲಿಲ್ಲ ಮತ್ತು ಅಷ್ಟು ಹಣ ಕೊಡುವ ನನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಮಗನಿಗೆ 2 ಲಕ್ಷ ಹಣ ಅವರ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕೊಟ್ಟಿದ್ದು ಆ ಬಗ್ಗೆ ಅವರ ಕಡೆಯಿಂದ ಬಾಂಡ ಬರೆಸಿಕೊಂಡು ಆರೋಪಿಕಡೆಯಿಂದ  ಮೂರು ಚೆಕ್ ಪಡೆದುಕೊಂಡು ಅವುಗಳನ್ನು ಒಂದನ್ನು ದುರುಪಯೋಗ ಮಾಡಿ ಈ ಸುಳ್ಳು ಫಿರ್ಯಾದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ